**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 271/2020**

**ಸಿ.ಡಬ್ಲ್ಯೂ-3**

**ಪಿ.ಡಬ್ಲ್ಯೂ-1**

**ಸಾಕ್ಷಿಗೆ ದಿನಾಂಕ 17-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ನಂಜೇಗೌಡ |
| ತಂದೆಯ ಹೆಸರು | ಃ | ಬೋರಲಿಂಗೇಗೌಡ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ದೊಡ್ಡಜಟಕ ಗ್ರಾಮ |

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>**

ನ್ಯಾಯಾಲಯದ ಮುಂದೆ ಇರುವ ಆರೋಪಿಯು ನಮ್ಮ ಊರಿನವರು. ಚಾಸಾ1 ಮತ್ತು 2 ರವರು ಕೂಡ ನಮ್ಮ ಊರಿನವರು. ಚಾಸಾ1 ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿತರು ಚಾಸಾ1 ಮತ್ತು 2 ರವರಿಗೆ ಹಲ್ಲೆ ನಡೆಸಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಪ್ರಾಣ ಬೆದರಿಕೆ ಹಾಕಿಲ್ಲ. ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಹಾಗಾಗಿ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಸಾಕ್ಷಿಯು ಪ್ರಕರಣದ ಪ್ರತ್ಯಕ್ಷ ಸಾಕ್ಷ ಆಗಿದ್ದು ಮುಖ್ಯ ವಿಚಾರಣೆಯಲ್ಲಿ ಸಾಕ್ಷಿಯು ಘಟನೆಯ ಕುರಿತಂತೆ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ದಿನಾಂಕ 16-05-2019 ರಂದು ರಾತ್ರಿ 11.55 ಗಂಟೆಗೆ ಚಾಸಾ1

**ಸಿ.ಡಬ್ಲ್ಯೂ-3**

**ಪಿ.ಡಬ್ಲ್ಯೂ-1**

ರವರು ಕೆಲಸ ಮುಗಿಸಿಕೊಂಡು ಮನೆಯ ಹತ್ತಿರ ಬಂದಾಗ ಆರೋಪಿತರು ಚಾಸಾ1 ಮತ್ತು 2 ರವರೊಂದಿಗೆ ತೆಗೆನ ಕಾಯಿ ತೆಗೆದುಕೊಂಡ ವಿಚಾರವಾಗಿ ವಿನಾ ಕಾರಣ ಜಗಳ ತೆಗೆದು ಚಾಸಾ1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದರು ಎಂದರೆ ಸರಿಯಲ್ಲ. 2ನೇ ಆರೋಪಿಯು ಚಾಸಾ1 ಮತ್ತು 2 ರವರುಗಳಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ನೋವುಂಟು ಪಡಿಸಿದ ಎಂದರೆ ಸರಿಯಲ್ಲ. 2ನೇ ಆರೋಪಿಯು ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ1 ರವರ ಬೆನ್ನಿಗೆ ಹೊಡೆದು ಗಾಯಪಡಿಸಿದರು ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ1 ಮತ್ತು 2 ರವರಿಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ಘಟನೆಯ ಕುರಿತಂತೆ ನನಗೆ ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **ಸಾಕ್ಷಿಯು ಒಪ್ಪಿಕೊಳ್ಳದ ಹೇಳಿಕೆಯನ್ನು ನಿಪಿ 1 ಎಂದು ಗುರುತಿಸಲಾಯಿತು.**

ಆರೋಪಿಯು ನಮ್ಮ ಊರಿನವರು ಎಂದರೆ ಸರಿ. ನಿಪಿ-1 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಕೋರಿಕೆ ಮೇರೆಗೆ ಆರೋಪಿಯ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**ನನ್ನ ಸಮಕ್ಷಮ**

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ನಾಗಮಂಗಲ.**

**ಸಿ.ಡಬ್ಲ್ಯೂ-3**
**ಪಿ.ಡಬ್ಲ್ಯೂ-1**

**CC. No.101/2017**

Case called out. Accused present.

CW-3 is present and examined him as PW-1, documents marked at Ex.P1. PW-1 turned hostile and learned APP cross examines in full. Advocate for the accused submits no cross-examination.

Reissue w/w to CW 2, 4 to 10.

**Call on 19-02-2025.**

**Civil Judge and JMFC.,**
**Nagamangala.**

**ಸಿ.ಡಬ್ಲ್ಯೂ-3**

**ಪಿ.ಡಬ್ಲ್ಯೂ-1**

**CC. No.**

Case called out. Accused Present.

CW-1 is present and examined him as PW-1, documents marked at Ex.P1 to P3. PW-1 turned hostile and learned APP cross examines in full. Advocate for the accused submits no cross-examination.

APP prays issuance of summons to other witnesses. Since material witness of the case turned hostile no purpose would be served by the examining other witnesses. Therefore prayer is rejected.

Since there is no incriminating evidence appears against the accused, statement as required U/sec 313 of Cr.Pc is hereby dispensed.

Heard both side.

For Judgment

**Call on**

**Civil Judge and JMFC.,**
**Nagamangala.**